# ಪತ್ರಿಕಾ ಪ್ರಕಟಣೆ

ಮಾನವ ಹಕ್ಕುಗಳು ಉಲ್ಲಂಘನೀಯವಲ್ಲ ಮತ್ತು ಅವು ಮೂಲಭೂತವಾದವು. ಸಂವಿಧಾನ ಶಿಲ್ಪಿಗಳು, ಮಾನವ ಹಕ್ಕುಗಳಿಗೆ ಅತೀ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ. ಅವುಗಳಿಗೆ ಮಾನ್ಯತೆ ನೀಡಿ ಸಂರಕ್ಷಿಸುವುದಕ್ಕಾಗಿ ಸಂವಿಧಾನದಲ್ಲಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದ್ದಾರೆ. 1993ರಲ್ಲಿ ಮಾನವ ಹಕ್ಕುಗಳ ಸಂರಕ್ಷಣೆ ಕಾನೂನನ್ನು ಸಹ ಸಂಸತ್ತಿನಲ್ಲಿ ಅಧಿನಿಯಮಿಸಲಾಗಿದೆ. ಸದರಿ ಕಾನೂನಿನಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ ಮತ್ತು ಜಿಲ್ಲಾ ಮಾನವ ಹಕ್ಕುಗಳ ನ್ಯಾಯಾಲಯಗಳನ್ನು ಸ್ಥಾಪಿಸಬೇಕಾಗಿದೆ.

ಮಾನವ ಹಕ್ಕುಗಳನ್ನು ಗೌರವಿಸುವ ವಿಷಯದಲ್ಲಿ ವಿಶಿಷ್ಟ ದಾಖಲೆಯುಳ್ಳ ಕರ್ನಾಟಕ ರಾಜ್ಯವು ಮಾನವ ಹಕ್ಕುಗಳ ಆಯೋಗವನ್ನು ಇಂದು ಸ್ಥಾಪನೆ ಮಾಡಿದೆ. ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 (1994ರ ಅಧಿನಿಯಮ 10) ರ ಅನ್ವಯ 28..9.1993ರಿಂದ ಜಾರಿಯಲ್ಲಿ ಬಂದಿದೆ. ಅಧಿನಿಯಮದ ಪ್ರಕರಣ 2(1) (ಡಿ) ಪ್ರಕಾರ ಮಾನವ ಹಕ್ಕುಗಳು ಎಂದರೆ, ಸಂವಿಧಾನದ ಮೂಲಕ ಖಾತರಿಪಡಿಸಲಾದ ಅಥವಾ ಅಂತರ ರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಒಳಗೊಂಡಿರುವ ಮತ್ತು ಭಾರತದ ನ್ಯಾಯಾಲಯಗಳಿಂದ ಜಾರಿಗೊಳಪಡಿಸಬಹುದಾದ, ವ್ಯಕ್ತಿಯ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಗೆ ಸಂಬಂಧಿಸಿದ ಹಕ್ಕುಗಳು, ಅಧಿನಿಯುಮದ ಪ್ರಕರಣ 21ರ ಪ್ರಕಾರ, ರಾಜ್ಯ ಸರ್ಕಾರವು, ರಾಜ್ಯ ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ಮಾನವ ಹಕ್ಕುಗಳ ಆಯೋಗವೆಂಬುದಾಗಿ ಕರೆಯಲಾಗುವ ಒಂದು ನಿಕಾಯವನ್ನು ರಚಿಸಲು ಅವಕಾಶ ಇದೆ.

ಈ ಅಧಿನಿಯಮದ ಪ್ರಕರಣ 20ರ ಉಪಪ್ರಕರಣ(2)ರ ಅನುಸಾರವಾಗಿ ರಾಜ್ಯ ಮಾನವ ಹಕ್ಕುಗಳ ಆಯೋಗವು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ:

1. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಒಬ್ಬ ಅಧ್ಯಕ್ಷರು.
2. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಒಬ್ಬ ಸದಸ್ಯರು.
3. ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಒಬ್ಬ ಸದಸ್ಯರು.
4. ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತಿಳುವಳಿಕೆಯುಳ್ಳ ಅಥವಾ ವ್ಯವಹಾರಿಕ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡಿಕೊಳ್ಳಬೇಕಾಗಿರುವ ಇಬ್ಬರು ಸದಸ್ಯರು.

ಕಾನೂನು ಇಲಾಖೆಯು ಮಾರ್ಚ್ 3ರಂದು ಸಚಿವ ಸಂಪುಟದ ಅನುಮೋದನೆ ಪಡೆದು ಜಾರಿಗೊಳಿಸಿರುವ ಕಾನೂನು ನೀತಿ ಮತ್ತು ಕ್ರಿಯಾಯೋಜನೆಯ ಮೊದಲ ಅಂಶವೇ ಮಾನವ ಹಕ್ಕುಗಳ ಆಯೋಗ ರಚನೆ ಮಾಡುವುದು ಆಗಿತ್ತು. ಆ ಪ್ರಮುಖ ಅಂಶ ಸರ್ಕಾರ ಆಯೋಗ ಸ್ಥಾಪನೆ ನಿರ್ಣಯ ಮಾಡುವ ಮೂಲಕ ಈಡೇರಿದೆ.

# PRESS NOTE

Human rights are inviolable and fundamental. The framers of the Constitution gave human rights top priority. They made adequate provisions to recognise and protect them. In 1993 the Protection of Human Rights Act was also enacted by the Parliament. The Act envisages the constitution of a State Human Rights Commission and District Human Rights Courts. The State of Karnataka, which has a enviable record of respecting human rights has made its commitment manifest by establishing the Human Rights Commission.

The Protection of Human Rights Act, 1993 [Act 10 of 1994] ("Act", for short) came into force on 28.09.1993. As per Section 2(1) (d) of the Act, 'human rights' means the rights relating to life, liberty, equality and dignity of the individual guaranteed by the Constitution or embodied in the International Covenants and enforceable by courts in India. As per Section 21 of the Act, a State Government may constitute a body to be known as Human Rights Commission to exercise the powers conferred upon, and to perform the functions assigned to, a State Commission.

According to sub-section (2) of Section 21 of the Act, the State Commission shall consist of –

a) A Chairperson who has been a Chief Justice of a High Court;
b) One Member who is, or has been, a Judge of a High Court;
c) One Member who is or has been, a district judge in that State;
d) Two Members to be appointed from amongst persons having knowledge of, or practical experience in, matters relating to human rights.

The Department of Law had announced its Policy and Action Plan on 3rd March 2005 with the approval of the State Cabinet. The first point of the Policy was to establish State Human Rights Commission. Now, with the establishment of the Karnataka Human Rights Commission this significant objective of the State Government stands realised.